೧	೨	೩	೪
೪	ಭದ್ರಾ ವಿದ್ಯುದಾಗಾರ	೨೩.೨	ಬಿ.ಆರ್. ಪ್ರಾಜೆಕ್ಟ್, ಲಕ್ಕವಳ್ಳಿ, ಚಿಕ್ಕಮಗಳೂರು ಜಿಲ್ಲೆ
೫	ಮುನಿರಾಬಾದ್ ವಿದ್ಯುದಾಗಾರ	೨೭.೦	ಮುನಿರಾಬಾದ್, ರಾಯಚೂರು ಜಿಲ್ಲೆ
೬	ತುಂಗಭದ್ರಾ ಅಣೆಕಟ್ಟು ವಿದ್ಯುದಾಗಾರ (ಶೇಕಡ ೨೦ ಪಾಲು)	೧೪.೪	ಹೊಸಪೇಟೆ, ಬಳ್ಳಾರಿ ಜಿಲ್ಲೆ
೭	ಶರಾವತಿ ವಿದ್ಯುದಾಗಾರ	೨೯೧.೦	ಜೋಗ್, ಶಿವಮೊಗ್ಗ
೮	ಲಿಂಗನಮಕ್ಕಿ ವಿದ್ಯುದಾಗಾರ	೫೫.೦	—"—
೯	ನಾಗಜರಿ ವಿದ್ಯುದುತ್ಪಾದನಾ ಕೇಂದ್ರ	೮೧೦.೦	ಅಂಬಿಕಾನಗರ, ಉತ್ತರ ಕನ್ನಡ ಜಿಲ್ಲೆ
೧೦	ಸುಪಾ ಅಣೆಕಟ್ಟು ವಿದ್ಯುದಾಗಾರ	೧೦೦.೦	ಗಣೇಶಗುಡಿ, ಸೂಪಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ
೧೧	ರಾಯಚೂರು ಶಾಖೋತ್ಪನ್ನ ವಿದ್ಯುದಾಗಾರ	೪೨೦.೦	ರಾಯಚೂರು, ರಾಯಚೂರು ಜಿಲ್ಲೆ
		೨೫೨೯.೮	

ಜಾನುವಾರು ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

೭೧ (೧೧೬) ಶ್ರೀ ಶಿವಶೇಖರಪ್ಪ ಗೌಡ ಶಿರವಾಳ್ (ಶಹಾಪುರ).—ಮಾನ್ಯ ರೇಷ್ಮೆ, ಪಶು ಸಂಗೋಪನೆ ಮತ್ತು ಪಶ್ವೌಷಧಿಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಜಾನುವಾರು ಪರೀಕ್ಷಕರ (ಲೈವ್‌ಸ್ಟಾಕ್ ಇನ್‌ಸ್ಪೆಕ್ಟರ್ಸ್) ಹುದ್ದೆಗಳಿಗೆ ನೇಮಕ ಮಾಡಲು ಎಷ್ಟು ಹುದ್ದೆಗಳಿಗಾಗಿ ಅರ್ಜಿ ಕರೆಯಲಾಗಿತ್ತು ?

ಆ) ಆ ಬಗ್ಗೆ ಎಷ್ಟು ಅಭ್ಯರ್ಥಿಗಳನ್ನು ಆರಿಸಲಾಯಿತು ?

ಇ) ಆರಿಸಿರುವವರ ಪೈಕಿ, ಎಷ್ಟು ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ ?

ಈ) ಉಳಿದವರಿಗೆ ಯಾವಾಗ ಆದೇಶ ನೀಡಲಾಗುವುದು ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ಪಶುಸಂಗೋಪನೆ, ರೇಷ್ಮೆ ಮತ್ತು ಮೀನುಗಾರಿಕೆ ಸಚಿವರು). —

ಅ) ೩೨೯ ಹುದ್ದೆಗಳಿಗೆ ಅರ್ಜಿ ಕರೆಯಲಾಗಿತ್ತು.

ಆ) ೩೬೫ ಅಭ್ಯರ್ಥಿಗಳನ್ನು ಆರಿಸಲಾಯಿತು.

ಇ) ೨೯೪ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.

ಈ) ಉಳಿದವರಿಗೆ ಹುದ್ದೆಗಳನ್ನು ಸೃಷ್ಟಿಸಿ ಖಾಲಿ ಆದಾಗ ನೇಮಕಾತಿ ಮಾಡಲಾಗುವುದು.

ವಲಯ ಅರಣ್ಯ ಅಧಿಕಾರಿಯನ್ನು ವರ್ಗಾಯಿಸುವ ಬಗ್ಗೆ

೭೨ (೧೪೧) ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ವಲಯ ಅರಣ್ಯ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ, ಅವರಲ್ಲಿ ಎಷ್ಟು ಜನರಿಗೆ ಅವಧಿ ಪೂರ್ವ ವರ್ಗಾವಣೆ ಆಗಿದೆ ?

ಆ) ಸರಕಾರಿ ಆದೇಶ ಸಂಖ್ಯೆ ಡಿಪಿಎಆರ್ ೯ ಎಸ್‌ಟಿಆರ್ ೮೪ ದಿನಾಂಕ ೫-೧೦-೮೫ ಮೇರೆಗೆ ಕನಿಷ್ಟ ಅವಧಿಗಿಂತಲೂ ಕಡಿಮೆ ಸೇವೆ ಸಲ್ಲಿಸಿದ ಎಷ್ಟು ಸದರಿ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ ?